(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ವಿ. ಗೋಪಾಲಗೌಡ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಉದಯ್ ಉಮೇಶ್ ಲಅತ್

ಎನ್. ವೆಂಕಟೇಶಪ್ಪ -ವಿರುದ್ಧ ಮುನೇಮ್ಮ ಮತ್ತು ಇತರರು

ಸಿವಿಲ್ ಅಪೀಸಂಖ್ಯೆ: 1351-1352/2016, ದಿನಾಂಕ 15 ನೇ ಫೆಬ್ರುವರಿ, 2016.

ತೀರ್ಪು

ನ್ಯಾಯಮೂರ್ತಿ ಶ್ರೀ ಉದಯ್ ಉಮೇಶ್ ಲಲಿತ್:

1. ಅನುಮತಿ ನೀಡಲಾಗಿದೆ.

2.ದಿನಾಂಕ: 27.07.2010 ರ ಎರಡನೇ ನಿಯತ ಅಪೀಲುಸಂಖ್ಯೆ: 323/2008 ರಲ್ಲಿನ ತೀರ್ಪು ಮತ್ತು ಆದೇಶ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,ದಿನಾಂಕ: 01.06.2011 ರ ಆರ್.ಪಿ.ಸಂಖ್ಯೆ: 476/2010 ರಲ್ಲಿನ ಆದೇಶದಿಂದ ಈ ಅಪೀಲುಗಳು ಉದ್ಭವಿಸಿವೆ.

3. ಭಾರತ ಸಂವಿಧಾನದ ಪ್ರಾರಂಭಕ್ಕೆ ಮುಂಚೆಯೇ ಅನುವಂಶಿಕವಾಗಿ ಹೊಂದಿದ್ದ ಗ್ರಾಮ ಹುದ್ದೆಗಳನ್ನು ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 ರ ಮೂಲಕ ರದ್ದುಪಡಿಸಲಾಗಿದೆ.ಈ ಅಧಿನಿಯಮದ 2 ( ಎ) ಪ್ರಕರಣದ ಅಡಿಯಲ್ಲಿದಿನಾಂಕ: 01.02.1963 ಗೊತ್ತುಪಡಿಸಿದ ದಿನಾಂಕವಾಗಿದೆ.ಈ ಅಧಿನಿಯಮದ 4 ನೇ ಪ್ರಕರಣ, ಗೊತ್ತುಪಡಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ ಎಲ್ಲಾ ಗ್ರಾಮ ಹುದ್ದೆಗಳನ್ನು ರದ್ದುಪಡಿಸಿದೆ ಮತ್ತು 4 ನೇ ಪ್ರಕರಣದ ( 3) ನೇ ಉಪ-ಪ್ರಕರಣವು 5, 6 ಮತ್ತು 7 ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು ಗ್ರಾಮ ಹುದ್ದೆಗೆ ಸೇರಿಸಲಾದ ಭೂಮಿಯನ್ನು ವಶಪಡಿಸಿಕೊಳ್ಳತಕ್ಕದ್ದು ಮತ್ತು ಪರಭಾರೆ ಮಾಡಿರದ ಭೂಮಿಯಂತೆ ಅಥವಾ ರೈತವಾರಿ ಭೂಮಿ ಹೇಗೋ ಹಾಗೆ ಭೂ ಕಂದಾಯ ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಪುನಃ ವಶಪಡಿಸಿಕೊಳ್ಳತಕ್ಕದ್ದು ಎಂಬುದನ್ನು ಗೊತ್ತುಪಡಿಸುತ್ತದೆ.ಈ ಅಧಿನಿಯಮದ 4 ನೇ ಪ್ರಕರಣದ 3 ನೇ ಖಂಡದ ಮೇರೆಗೆ ಹಿಂದಕ್ಕೆ ಪಡೆದುಕೊಳ್ಳಲಾದ ಭೂಮಿಗಳನ್ನು ನಿರ್ದಿಷ್ಟಪಡಿಸಲಾದಂತೆ ಅಂಥ ಸಂದಾಯದ ಮೇಲೆ ಗೊತ್ತುಪಡಿಸಲಾದ ದಿನಾಂಕಕ್ಕೆ ಹಿಂದೆಯೇ ಗ್ರಾಮ ಹುದ್ದೆಗಳ ಹಿಡುವಳಿದಾರರಾಗಿರುವ ವ್ಯಕ್ತಿಗೆ ಕೂಡಲೇ ಮಂಜೂರು ಮಾಡಿದ್ದು, ಈ ಅಧಿನಿಯಮ 6 ಮತ್ತು 7 ನೇ ಪ್ರಕರಣಗಳ ಅಡಿಯಲ್ಲಿ ಬರುವುದಿಲ್ಲ ಎಂಬುದನ್ನು ಈ ಅಧಿನಿಯಮದ 5 ನೇ ಪ್ರಕರಣವು ಪ್ರತಿಪಾದಿಸುತ್ತದೆ.ವಶಪಡಿಸಿಕೊಂಡ ಭೂಮಿಯು ಅಧಿಕೃತ ಹಿಡುವಳಿದಾರರ ವಶದಲ್ಲಿದ್ದರೆ, ಒಂದು ನಿರ್ದಿಷ್ಟವಾದ ಅಧಿಭೋಗ ಬೆಲೆ ಸಂದಾಯದ ಮೇಲೆ ಭೂಮಿಯನ್ನು ಅಂತಹ ಹಿಡುವಳಿದಾರರಿಗೆ ಮತ್ತೊಮ್ಮೆ ಒಪ್ಪಿಸಬಹುದು ಎಂಬುದನ್ನು ಈ ಅಧಿನಿಯಮದ 6 ಮತ್ತು 7 ನೇ ಪ್ರಕರಣವು ಪ್ರತಿಪಾದಿಸುತ್ತದೆ.

4. ಈ ಅಧಿನಿಯಮವನ್ನು ಅಧಿನಿಯಮಸಂಖ್ಯೆ: 13/1978 ರ ಮೂಲಕ ತಿದ್ದುಪಡಿ ಮಾಡಿದ್ದು, ಇತರ ವಿಷಯಗಳ ಜೊತೆಗೆ 5 ( 4) ನೇ ಪ್ರಕರಣವನ್ನು ಈ ಕೆಳಗಿನಂತೆ ಸೇರಿಸಲಾಗಿದೆ:

" 5 ( 4) ( 3) ಉಪ-ಪ್ರಕರಣವನ್ನು ಉಲ್ಲಂಘಿಸಿ ಮಾಡಿದ ಭೂಮಿಯ ಯಾವುದೇ ವರ್ಗಾವಣೆಯು, ಆಕೃತ ಮತ್ತು ಶೂನ್ಯವಾಗಿರತಕ್ಕದ್ದು ಮತ್ತು ಹಾಗೆ ವರ್ಗಾವಣೆ ಮಾಡಿದ ಭೂಮಿಯನ್ನು ದಂಡವಾಗಿ, ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಅದು ಅದರಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರ ಸ್ವಾಧೀನದಲ್ಲಿರುವ ಯಾವನೇ ವ್ಯಕ್ತಿಯನ್ನು ಡೆಪ್ಯೂಟಿ ಕಮೀಷನರರನು ಅದರಿಂದ ಕ್ಷಿಪ್ರವಾಗಿ ಹೊರಹಾಕತಕ್ಕದ್ದು ಮತ್ತು ಆ ಭೂಮಿಯನ್ನು ಅಧಿಭೋಗದಲ್ಲಿಲ್ಲದ, ಪರಭಾರೆ ಮಾಡಿಲ್ಲದ ಭೂಮಿಗಳ ವಿಲ್ಲೆ ಅನ್ವಯವಾಗಬಹುದಾದ ಕಾನೂನಿಗನುಸಾರವಾಗಿ ವಿಲೆ ಮಾಡತಕ್ಕದ್ದು;

ಪರಂತು, ( 3) ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ಆ ಬಮಿಯನ್ನು ವರ್ಗಾವಣೆ ಮಾಡಿರುವ ವ್ಯಕ್ತಿಯು ಜೀವಂತವಾಗಿಲ್ಲದಿದ್ದರೆ ಅಂಥ ಭೂಮಿಯನ್ನು ವಿಲೆ ಮಾಡುವಲ್ಲಿ ಅಂಥ ವ್ಯಕ್ತಿಯ ವಾರಸುದಾರರಿಗೆ ಆದ್ಯತೆಯನ್ನು ಕೊಡತಕ್ಕದ್ದು.

ವಿವರಣೆ:ಸಂದೇಹಗಳ ನಿವಾರಣೆಗಾಗಿ ( 3) ನೇ ಉಪ-ಪ್ರಕರಣದಲ್ಲಿ ಮತ್ತು ಈ ಉಪ ಪ್ರಕರಣದಲ್ಲಿ ವರ್ಗಾವಣೆಯು ಗೇಣಿಯನ್ನು ಸೃಷ್ಟಿಸುವುದನ್ನು ಒಳಗೊಳ್ಳುತ್ತದೆ ಎಂಬುದಾಗಿ ಈ ಮೂಲಕ ಘೋಷಿಸಲಾಗಿದೆ.

ತಿದ್ದುಪಡಿ ಅಧಿನಿಯಮದಿಂದ ಬದಲಾದ ಅಧಿನಿಯಮದ 7 ನೇ ಪ್ರಕರಣವು ಈ ಮುಂದಿನಂತಿದೆ:

7. ಅನಧಿಕೃತ ಹಿಡುವಳಿದಾರರನ್ನು ಹೊರಹಾಕುವುದು ಇತ್ಯಾದಿ:( 1) 4 ನೇ ಪ್ರಕರಣದ ( 3) ನೇ ಖಂಡದ ಮೇರೆಗೆ ಪುನಃ ವಶಪಡಿಸಿಕೊಂಡ ಯಾವುದೇ ಭೂಮಿ ಅನಧಿಕೃತ ಹಿಡುವಳಿದಾರನ ಸ್ವಾಧೀನದಲ್ಲಿರುವಲ್ಲಿ ಅಂಥ ಅನಧಿಕೃತ ಹಿಡುವಳಿದಾರನನ್ನು ಅದರಿಂದ ಕ್ಷಿಪ್ರವಾಗಿ ಹೊರಹಾಕತಕ್ಕುದು ಮತ್ತು ಆ ಭೂಮಿಯನ್ನು ಡೆಪ್ಯೂಟಿ ಕಮೀಷನರರನು ಕಾನೂನಿಗೆ ಅನುಸಾರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕುದು:

ಪರಂತು, ಯಾವುದೇ ಅಂಥ ಕ್ಷಿಪ ಹೊರಹಾಕುವಿಕೆಯನ್ನು, ಬಾಧಿತನಾದ ವ್ಯಕ್ತಿಗೆ ಮನವಿಯನ್ನು ಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಮಾಡತಕ್ಕುದಲ್ಲ.

(2) (1) ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೆ ಹೊರಹಾಕುವಿಕೆಯ ಆದೇಶವು ಅಂತಿಮವಾಗಿರತಕ್ಕುದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ( 1) ನೇ ಉಪ-ಪ್ರಕರಣದ ಮೂಲಕ ಪ್ರದಾನಮಾಡಿದ ಅಧಿಕಾರಿಗಳ ಅನುಸರಣೆಯಲ್ಲಿ ಡೆಪ್ಯೂಟಿ ಕಮೀಷನರರನು ಕೈಗೊಂಡ ಅಥವಾ ಇಷ್ಟರಲ್ಲಿ ಕೈಗೊಳ್ಳಲಿರುವ ಯಾವುದೆ ವ್ಯವಹರಣೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯವು ಯಾವುದೇ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡತಕ್ಕುದಲ್ಲ.

(3) (1) ನೇ ಉಪ-ಪುರಕಣದ ಮೇರೆಗೆ ಯಾವ ಭೂಮಿಯಿಂದ ಅನಧಿಕೃತ ಹಿಡುವಳಿದಾರನನ್ನು ಹೊರಹಾಕಲಾಗಿದೆಯೋ ಆ ಭೂಮಿಯನ್ನು-

(ಎ) ಅದು, ಕೆಳದರ್ಜೆಯ ಗ್ರಾಮ ಹುದ್ದೆಗೆ ಸಂಬಂಧಿಸಿದಂತೆ ಮಂಜೂರು ಮಾಡಿದ್ದರೆ ಅಥವಾ ಮುಂದುವರಿಸಿದ್ದರೆ ಅಥವಾ ಅದಕ್ಕೆ ಲಗತ್ತಿಸಿದ್ದರೆ, ಅಂಥ ಗ್ರಾಮ ಹುದ್ದೆಯ ಧಾರಕನಿಗೆ ಮರು ಮಂಜುರಾತಿ ಮಾಡತಕ್ಕುದು.ಮತ್ತು

(ಬಿ) ಇತರ ಸಂದರ್ಭಗಳಲ್ಲಿ ಅದನ್ನು ಅಧಿಭೋಗದಲ್ಲಿಲ್ಲದ, ಪರಭಾರೆ ಮಾಡಿಲ್ಲದ ಭೂಮಿಗಳ ವಿಲೆಗೆ ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ ವಿಲೆ ಮಾಡತಕ್ಕದು."

5. ಹಿಡುವಳಿದಾರ ಅಥವಾ ಅಧಿಕೃತ ಹಿಡುವಳಿದಾರರಿಂದ ನೀಡಿದ ಸೇವಾ ಇನಾಮು ಭೂಮಿಯನ್ನು ಪರಭಾರೆ ಪಡೆದವನ ಹಕ್ಕುಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಪರಿಗಣಿಸುವ ಸಂದರ್ಭವು ಲಕ್ಷ್ಮಣಗೌಡ -ವಿರುದ್ಧ-ಕರ್ನಾಟಕ ರಾಜ್ಯ ' ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠಕ್ಕೆ ಒದಗಿಬಂದಿತ್ತು.ಅದು ವಿವಿಧ ವಿವಾದಾಂಶಗಳೊಂದಿಗೆ ವ್ಯವಹರಿಸಿದೆ, ಆದರೆ, ಸಂಬಂಧಪಟ್ಟ ಪ್ರಸ್ತುತ ವಿಷಯವು ಪ್ರಶ್ನೆ ಸಂ. (iii) ಆಗಿರುತ್ತದೆ ಮತ್ತು ಅದು ಈ ಮುಂದಿನಂತೆ ಪರಿಣಾಮಕಾರಿಯಾಗಿದೆ:

(iii) ಸಂದರ್ಭಾನುಸಾರ ' ಪ್ರಧಾನ ಅಧಿನಿಯಮದ 5 ಮತ್ತು 6 ನೇ ಪ್ರಕರಣದ ಅಡಿಯಲ್ಲಿ ಅದರ ಹಿಡುವಳಿದಾರ ಅಥವಾ ಅಧಿಕೃತ ಹಿಡುವಳಿದಾರನಿಗೆ ಮರು ಮಂಜೂರಾತಿಯ ತರುವಾಯ, ಪ್ರಧಾನ ಅಧಿನಿಯಮ ಜಾರಿಗೆ ಬಂದ ದಿನಾಂಕ ಮತ್ತು ಮರು ಮಂಜೂರಾತಿ ಜಾರಿಯಾದ ದಿನಾಂಕದ ನಡುವೆ ಏನಾದರೂ ಪರಭಾರೆ ಸ ಂ ಭವಿಸಿದ್ದರೆ, ಹಿಡುವಳಿದಾರ ಅಥವಾ ಅಥವಾ ಅಧಿಕೃತ ಹಿಡುವಳಿದಾರನಿಂದ ನೀಡಿದ ಸೇವಾ ಇನಾಮು ಭೂಮಿಯನ್ನು ಪರಭಾರೆ ಪಡೆದವನಿಗೆ ಅಂತಹ ಭೂಮಿಯ ಮೇಲೆ ಹಕ್ಕು ಸಾಧಿಸಲು ಸಾಧ್ಯವೇ?

6. ಈ ಹಿಂದೆ ಹೇಳಲಾದ ಪ್ರಶ್ನೆಗೆ ಈ ತೀರ್ಪಿನ ಪ್ಯಾರಾ 66 ರಲ್ಲಿ ಈ ಕೆಳಗಿನಂತೆ ಉತ್ತರಿಸಲಾಗಿದೆ:

' ಪ್ರಧಾನ ಅಧಿನಿಯಮ ಜಾರಿಗೆ ಬಂದ ತರುವಾಯ ಮತ್ತು ಪ್ರಧಾನ ಅಧಿನಿಯಮದ 5 ನೇ ಅಥವಾ ಏನೇ ಪ್ರಕರಣದ ಅಡಿಯಲ್ಲಿ, ಆತನಿಗೆ ಮರು ಮಂಜೂರಾತಿ ಮಾಡುವ ಮುಂಚೆ ಹಿಡುವಳಿದಾರ ಅಥವಾ ಅಧಿಕೃತ ಹಿಡುವಳಿದಾರನು ಸೇವಾ ಇನಾಮು ಭೂಮಿಯನ್ನು ಪರಭಾರೆ ಪಡೆದಿದ್ದರೆ, ಅಂತಹ ಮರು ಮ ಂ ಜೂರಾತಿಯ ತರುವಾಯ ಆ ಭೂಮಿಯನ್ನು ಪರಭಾರೆ ಪಡೆದವನು ಸ್ವಾಧೀನ ಪಡಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆ ಎಂಬುದು ಮೇಲಿನ ಪ್ರಶ್ನೆಗೆ ನಮ್ಮ ಉತ್ತರವಾಗಿರುತ್ತದೆ. "

7. ಚರ್ಚೆಯ ಅವಧಿಯಲ್ಲಿ ಈ ಹಿಂದೆ ಹೇಳಲಾದ ಪ್ರಶ್ನೆಗೆ ಸಂಬಂಧಿಸಿದಂತೆ ಈ ಮುಂದಿನಂತೆ ಸಹ ಅಭಿಪ್ರಾಯಪಟ್ಟಿದೆ:

" ಪ್ರಧಾನ ಅಧಿನಿಯಮದ 5 ಅಥವಾ 6 ನೇ ಪ್ರಕರಣದ ಅಡಿಯಲ್ಲಿ ಆತನಿಗೆ ವಾಸ್ತವಿಕವಾಗಿ ಮರು ಮಂಜೂರಾತಿ ನೀಡಿರುವಾಗ ಮಾತ್ರ ಹಿಡುವಳಿದಾರ ಅಥವಾ ಅಧಿಕೃತ ಹಿಡುವಳಿದಾರನು ಸೇವಾ ಇನಾಮು ಭೂಮಿಯ ಹಕ್ಕನ್ನು ಪಡೆದುಕೊಳ್ಳುತ್ತಾನೆಯಾದರೂ, ಅಂತಹ ಹಕ್ಕು, ' ಪ್ರಧಾನ ಅಧಿನಿಯಮ ಜಾರಿಗೆ ಬಂದ ದಿನಾಂಕಕ್ಕೆ ಸ ಂ ಬ ಂ ಧಿ ಸುತ್ತದೆ ಎ ಎ ಂ ಂ ಬುದನ್ನು ಬುದನ್ನು ನಾವು ನಾವು ಈಗಾಗಲೇ ಅಭಿಪ್ರಾಯಪಟ್ಟಿದ್ದೇವೆ.ಇದರಿಂದ, ಅವನಿಗೆ ಮತ್ತು ಮಂಜೂರಾತಿ ನೀಡುವ ಮುಂಚೆ ಅಂಥ ಭೂಮಿಯನ್ನು ಪರಭಾರೆ ಮಾಡಿರುವುದು ಕಂಡುಬಂದಲ್ಲಿ, ಸ್ವತ್ತು ವರ್ಗಾವಣೆ ಅಧಿನಿಯಮದ 43 ನೇ ಪ್ರಕರಣದಲ್ಲಿ ಒಳಗೊಂಡ ವಿಬಂಧಗಳ ಮೂಲಕ ಮಂಜೂರಾತಿ ನೀಡುವ ಸಿದ್ಧಾಂತವು ಪ್ರಧಾನ ಅಧಿನಿಯಮದ ಜಾರಿಯ ತರುವಾಯ ಅನ್ವಯಿಸುತ್ತದೆ ಮತ್ತು ಅಂತಹ ಮರು ಮಂಜೂರಾತಿಯು ಭೂಮಿಯ ಮೇಲೆ ಸಾಧಿಸಿಕೊಂಡ ಹಕ್ಕು ಮತ್ತು ಮಂಜೂರಾತಿಯ ನಂತರ, ಪರಭಾರೆಕಾರನು ಭೂಮಿಯ ಮೇಲೆ ಒಂದು ಒಳ್ಳೆಯ ಸ್ವಾಮ್ಯವನ್ನು ಪಡೆದುಕೊಂಡು ಪರಭಾರೆ ಪಡೆದವನ ಪ್ರಯೋಜನವನ್ನು ಖಾತ್ರಿಗೊಳಿಸುತ್ತದೆ."

8. ಲಕ್ಷ್ಮಣಗೌಡ ಪ್ರಕರಣದಲ್ಲಿ ಈ ಹಿಂದೆ ಹೇಳಿದ ಅಭಿಪ್ರಾಯವನ್ನು ಸೈಯದ್ ಜಾಸೀರ್ ಅಹಮ್ಮದ್ ವಿರುದ್ಧ ಕರ್ನಾಟಕ ರಾಜ್ಯ 2 ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ದೃಢೀಕರಿಸಿದೆ.ದಿನಾಂಕ: 01.02.1963 ಮತ್ತು 07.08.1978 ರ ನಡುವೆ ಮಾಡಿದ ಪರಭಾರೆಯ ಅಡಿಯಲ್ಲಿ ಪರಭಾರೆ ಪಡೆದವನ ಹಕ್ಕುಗಳನ್ನು ಪರಿಗಣಿಸುವಾಗ, ಅಂದರೆ, ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ದಿನಾಂಕ ಮತ್ತು ಗೊತ್ತುಪಡಿಸಲಾದ ದಿನಾಂಕದ ಅವಧಿಯ ೨ ನಡುವೆ ಸಂಭವಿಸಿದ ಪರಭಾರೆ ಹಕ್ಕುಗಳನ್ನು ಪರಿಗಣಿಸುವಾಗ, ಪೂರ್ಣ ಪೀಠವು ತನ್ನ ತೀರ್ಪಿನ ಪ್ಯಾರಾ 30 (ಎಫ್) ನಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

*ದಿನಾಂಕ: 1.2.1963 ಮತ್ತು 7.8.1978 ರ ನಡುವೆ ಮಾಡಿದ ಪರಭಾರೆ ಮೇರೆಗೆ ಪರಭಾರೆ ಪಡೆದವನನ್ನು ಉಚ್ಚಾಟಿಸಲು ರಾಜ್ಯ ಸರ್ಕಾರ ಅಥವಾ ಅದರ ಪ್ರಾಧಿಕಾರಗಳಿಗೆ ಈ ಅಧಿನಿಯಮದಲ್ಲಿ ಉಪಬ 0 ಧಗಳಿರುವುದಿಲ್ಲ.ಹಾಗೆಯೇ ಪರಭಾರೆ ಪಡೆದವನು, ' ಅಧಿಕೃತ ಹಿಡುವಳಿದಾರನಾಗಿರುವುದಿಲ್ಲ ' ಎಂಬುದಕ್ಕೆ 7 ನೇ ಪ್ರಕರಣವು ಅನ್ವಯಿಸುವುದಿಲ್ಲ.ದಿನಾಂಕ: 1.2.1963 ಮತ್ತುದಿನಾಂಕ: 7.8.1978 ರ ನಡುವೆ ಪರಭಾರೆ ಮಾಡಿದ ಭೂಮಿಯನ್ನು ತರುವಾಯ ಪರಭಾರೆಕಾರನಿಗೆ ಮರು-ಮಂಜೂರಾತಿ ಮಾಡಿದ್ದಲ್ಲಿ ಅಂಥ ಮರು ಮಂಜೂರಾತಿ ಪ್ರಯೋಜನವು, ಅಂದರೆ, ಹಕ್ಕು ಪರಭಾರೆ ಪಡೆದವನ ಪ್ರಯೋಜನವನ್ನು ಖಾತ್ರಿಗೊಳಿಸುತ್ತದೆ.ಆ ಭೂಮಿಯು, ಪರಭಾರೆಕಾರನಿಗೆ ಮತ್ತು ಮಂಜೂರಾತಿಯಾಗದಿದ್ದಲ್ಲಿ, ಆದರೆ ಪರಭಾರೆ ಕಾರನು ಹಿಡುವಳಿದಾರ ಅಥವಾ ಅಧಿಕೃತ ಹಿಡುವಳಿದಾರನಾಗಿರುವುದಿಲ್ಲವೆಂಬ ಆಧಾರದ ಮೇಲೆ ಬೇರೊಬ್ಬನಿಗೆ ಮರು-ಮಂಜೂರಾತಿಯಾಗಿದ್ದಲ್ಲಿ ನಂತರ ಪರಭಾರೆ ಪಡೆದವನು ಯಾವುದೇ ಹಕ್ಕಿಲ್ಲದೆ ವ್ಯಕ್ತಿಯಿಂದ ವರ್ಗಾವಣೆ ಪಡೆಯಲು ಅರ್ಹನಿರುತ್ತಾನೆ, ಮತ್ತು ಮರು-ಮಂಜೂರಾತಿ ಪಡೆದ ಮ ಂ ಜೂರಾತಿದಾರನು, ಪರಭಾರೆ ಪಡೆದವನಿಂದ ಸ್ವಾಧೀನವನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ ಮತ್ತು ಪರಭಾರೆ ಪಡೆದವನ ಸ್ವಾಧೀನವನ್ನು ತಪ್ಪಿಸಲು ಮಂಜೂರಾತಿ ಪಡೆದವನ ಪರಿಮಿತಿಯು, ಮರು ಮ ಂ ಜೂರಾತಿಯ ದಿನಾ ಂ ಕದಿ ಂ ದ ಪ್ರಾರಂಭವಾಗುತ್ತದೆ.೨೨

9. ಹೊಸಹಳ್ಳಿ ಗ್ರಾಮ, ಕೋಲಾರ ಜಿಲ್ಲೆ, ಕರ್ನಾಟಕ ರಾಜ್ಯದ ಸರ್ವೇ ನಂ .83 ನ್ನು ಹೊಂದಿದ 3 ಎಕರೆ 39 ಗುಂಟೆಗಳ ವಿಸ್ತೀರ್ಣವಿರುವ ಕೃಷಿ ಭೂಮಿಯು, ತಳವಾರಿ ಇನಾಂತಿ ಜಮೀನಾಗಿದ್ದು, ಮೂಲ ಸಾಗುವಳಿದಾರರಾದ ಮುನಿಪಾಪಣ್ಣ ಮತ್ತು ಆತನ ತಂದೆ ನರಸಪ್ಪನವರ ಸ್ವಾಧೀನದಲ್ಲಿರುತ್ತದೆ. ಸದರಿ ಮುನಿಪಾಪಣ್ಣಮತ್ತು ನರಸಪ್ಪರವರು, ನಡುಮಲ್ಲಿ ಮುನೆಪ್ಪನ ಹೆಸರಿನಲ್ಲಿ ನೋಂದಾಯಿತ ಕ್ರಯಪತ್ರದಿನಾಂಕ: 13.05.1971 ರ ಮೇರೆಗೆ ಈ ಭೂಮಿಯನ್ನು ಮಾರಾಟ ಮಾಡಿರುತ್ತಾರೆ.ಕ್ರಯಪತ್ರವನ್ನು ಅನುಸರಿಸಿ, ಪರೆಭಾರೆ ಪಡೆದವನಿಗೆ ಆ ಭೂಮಿಯ ಸ್ವಾಧೀನವನ್ನು ನೀಡಲಾಗಿರುತ್ತದೆ.ದಿನಾಂಕ: 31.03.1982 ರಂದು ಆ ಪ್ರಶ್ನಿತ ಭೂಮಿಯನ್ನು, ಮುನಿಪಾಪಣ್ಣರವರಿಗೆ ಮರು ಮಂಜೂರಾತಿ ನೀಡಲಾಗಿದೆ.ಇದನ್ನು ಅಪೀಲಿನಲ್ಲಿ ಪ್ರಶ್ನಿಸಲಾಗಿದೆ ಮತ್ತು ಹೊಸದಾಗಿ ಆದೇಶಗಳನ್ನು ನೀಡಲು ಆ ವಿಷಯವನ್ನು ತಹಸೀಲ್ದಾರ್ರಿಗೆ ಕಳುಹಿಸಲಾಗಿದೆ.ಅದಕ್ಕನುಸಾರವಾಗಿ, ಹೊಸದಾಗಿ ಮರು ಮಂಜೂರಾತಿ ವ್ಯವಹರಣೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಸದರಿ ಮುನಿಪಾಪಣ್ಣ ಮತ್ತು ಇತರೇ ಇಬ್ಬರಿಗೆ ಆ ಭೂಮಿಯನ್ನು ಮರು ಮಂಜೂರಾತಿ ನೀಡಲಾಗಿದೆ.ಇತರೇ ಇಬ್ಬರಿಗೆ ಮರು-ಮಂಜೂರಾತಿ ನೀಡಿದ್ದನ್ನು, ಮುನಿಪಾಪಣ್ಣರಿಂದ ಪ್ರಶ್ನಿಸಲಾಗಿದ್ದು, ಅದನ್ನು ಪುರಸ್ಕರಿಸಿದ್ದಲ್ಲದೆ ಮುನಿಪಾಪಣ್ಣರವರ ಹೆಸರಿನಲ್ಲಿರುವಂತೆ ಮರು ಮಂಜೂರಾತಿಯನ್ನು ಸ್ಥಿರೀಕರಿಸಲಾಗಿದೆ.ಈ ವ್ಯವಹರಣೆಗಳು ಅಂತಿಮತೆಯನ್ನು ಪಡೆದುಕೊಂಡಿದೆ ಮತ್ತು ನಿರ್ಣಾಯಕವಾಗಿದೆ.

10. ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕಿರಿಯ ವಿಭಾಗ, ಶ್ರೀನಿವಾಸಪುರ, ಕೋಲಾರ ಜಿಲ್ಲೆಯಲ್ಲಿ ಪರಭಾರೆ ಪಡೆದವನಾದ ನಡುಮ್ಮಲ್ಲಿ ಮುನೆಪ್ಪನ್ ಉತ್ತರಾಧಿಕಾರವನ್ನು ಹೊಂದಿದ್ದು, ಪ್ರಸ್ತುತ ಅಪೀಲುದಾರನು ಮೂಲ ದಾವೆ ಸಂ .19/2004 ನ್ನು ದಾಖಲಿಸಿರುತ್ತಾರೆ.ಮೂಲ ಹಿಡುವಳಿದಾರನ ಹೆಸರಿನಲ್ಲಿ ಮರು-ಮಂಜೂರಾತಿ ನೀಡಿದ ತರುವಾಯ, ಇದರಲ್ಲಿ ಮೇಲೆ ನಮೂದಿಸಲಾದಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪುಗಳ ಆಧಾರದಿಂದ, ವಾದಿಯು, ಪ್ರಶ್ನಿತ ಚ ಜಮೀನಿಗೆ ಹಕ್ಕುಳ್ಳವನಾಗಿರುತ್ತಾನೆಯೆಂದು ವಾದ ಮಂಡಿಸಲಾಗಿದೆ.ಆದಾಗ್ಯೂ, ಪ್ರತಿವಾದಿಗಳು ಅಂದರೆ, ಮುನಿಪಾಪಣ್ಣನ ಪತ್ನಿ ಮತ್ತು ಮಕ್ಕಳು, 5 ಮತ್ತು 6 ನೇ ಪ್ರತಿವಾದಿಗಳ ಹೆಸರಿನಲ್ಲಿ ನೋಂದಾಯಿತ ಕ್ರಯಪತ್ರ ಬರೆದುಕೊಡಲಾಗಿದೆ ಅ ಮತ್ತು ವಾದಿಯ ಸ್ವಾಧೀನಕ್ಕೆ ಅಡ್ಡಿಪಡಿಸಲು ಅವರುಗಳು ಕೋರಿದ್ದಾರೆಂದು ಮುಂದುವರೆದು ವಾದ ಮಂಡಿಸಿದ್ದಾರೆ.ಈ ಎಲ್ಲಾ ಸಮರ್ಥನೆಗಳೊಂದಿಗೆ, ಪ್ರಶ್ನಿತ ಜಮೀನಿನ ನಿರುಪಾಧಿಕ ಒಡೆಯನೆಂದು ಘೋಷಿಸುವಂತೆ ವಾದಿಯು ಮನವಿ ಮಾಡಿದ್ದಾನೆ ಮತ್ತು ತನ್ನ ಶಾಂತಿಯುತ ಸ್ವಾಧೀನದಲ್ಲಿ ಹಸ್ತಕ್ಷೇಪ ಮಾಡುವುದರಿಂದ ಪ್ರತಿವಾದಿಗಳನ್ನು ನಿಗ್ರಹಿಸುವುದಕ್ಕೆ ಯುಕ್ತ ಖಾಯಂ ನಿರ್ಬಂಧಕಾಜ್ಞೆಗಾಗಿ ಸಹ ಮನವಿ ಮಾಡಿದ್ದಾನೆ.

11. ಎಲ್ಲಾ ಪ್ರತಿವಾದಿಗಳು ಒಂದೇ ರೀತಿಯ ಲಿಖಿತ ಹೇಳಿಕೆಯನ್ನು ದಾಖಲು ಮಾಡಿದ್ದಾರೆ.ದಿನಾಂಕ: 28.05.1971 ರಂದು ವಾದಿಯ ಪೂರ್ವಿಕನ ಹೆಸರಿನಲ್ಲಿ ಪರಭಾರೆ ಮಾಡಲಾಗಿದೆ ಎಂಬುದಕ್ಕೆ ಯಾವುದೇ ವಿವಾದವಿರುವುದಿಲ್ಲ.ಆದರೆ, ಈ ಅಧಿನಿಯಮದ 7 ನೇ ಪ್ರಕರಣದ ಅಡಿಯಲ್ಲಿ ತಹಸೀಲ್ದಾರ್ರಿಂದ ಪ್ರಾರಂಭಿಸಲಾದ ವ್ಯವಹರಣೆಗಳಲ್ಲಿ, ಪರಭಾರೆಕಾರನ ವಿರುದ್ಧ ಹೊರಹಾಕುವ ಆದೇಶವನ್ನು ಹೊರಡಿಸಲಾಗಿದೆ ಮತ್ತು ಪರಭಾರೆಕಾರನನ್ನುದಿನಾಂಕ: 24.09.1981 ರಂದು ಆ ಭೂಮಿಯಿಂದ ಹೊರ ಹಾಕಲಾಗಿದೆ ಎಂದು ವಾದ ಮಂಡಿಸಲಾಗಿದೆ.ಮುನಿಪಾಪಣ್ಣ ಹೆಸರಿನಲ್ಲಿ ಮರು ಮಂಜೂರಾತಿ ನೀಡಲಾಗಿದ್ದು, ಆ ಪ್ರಯೋಜನವನ್ನು ಸದರಿ ಪಾಪಣ್ಣ ಅಷ್ಟೇ ಅಲ್ಲದೇ ಅವನ ವಾರಸುದಾರರಿಗೆ ನೀಡತಕ್ಕದ್ದು ಮತ್ತು ವಾದಿಯು, ಪ್ರಶ್ನಿತ ಭೂಮಿಯಲ್ಲಿ, ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಹೊಂದಿರುವುದಿಲ್ಲವೆಂದು ವಾದ ಮಂಡಿಸಲಾಗಿದೆ.

12. ಅಧಿವಿಚಾರಣಾ ನ್ಯಾಯಾಲಯವು,ದಿನಾಂಕ: 12.02.2007 ರಂದು ಹೊರಡಿಸಿದ ತೀರ್ಪು ಮತ್ತು ಆದೇಶದ ಮೂಲಕ ವಾದಿಯ ಕ್ಲೇಮುನ್ನು ಅಂಗೀಕರಿಸಿದೆ ಮತ್ತು ದಾವೆಯನ್ನು ಡಿಕ್ರಿ ಮಾಡಿರುತ್ತದೆ.ಲಕ್ಷ್ಮಣಗೌಡ ಮತ್ತು ಸೈಯದ್ ಬಶೀರ್ ಅಹಮ್ಮದ್ ಪ್ರಕರಣದಲ್ಲಿನ ತೀರ್ಮಾನಗಳ ಮೇಲೆ ಅವಲಂಬಿಸಿದ್ದು,ದಿನಾಂಕ: 01.02.1963 ಮತ್ತು 07.08.1978 ರ ನಡುವಿನ ಪರಭಾರೆ ಅಸಿಂಧುವಾಗಿರುವುದಿಲ್ಲ ಮತ್ತು ಆ ಭೂಮಿಯು ಮುನಿಪಾಪಣ್ಣ ಹೆಸರಿನಲ್ಲಿ ಮರು ಮಂಜೂರಾತಿ ಹೊಂದಿದ್ದು, ಪರಭಾರೆಕಾರನು ಈ ಅಧಿನಿಯಮದ 5 ( 1) ಅಥವಾ 6 ನೇ ಪ್ರಕರಣದ ಅಡಿಯಲ್ಲಿ ಪದದ ಪರಭಾರೆಕಾರ/ಹಿಡುವಳಿದಾರನ ಹೆಸರಿನಲ್ಲಿರುವ ಭೂಮಿಯ ಮರು ಮಂಜೂರಾತಿಯ ದೃಷ್ಟಿಯಿಂದ ನಿಬಂಧದ ಮೂಲಕ ಮಂಜೂರಾತಿ ನೀಡುವ ಸಿದ್ಧಾಂತದ ಮೂಲಕ ಪ್ರಯೋಜನವನ್ನು ನಿಶ್ಚಿತವಾಗಿ ಕ್ಲೇಮು ಮಾಡಬಹುದು ಮತ್ತು ಅದರಿಂದ, 5 ಹಾಗೂ 6 ನೇ ಪ್ರತಿವಾದಿಯ ಹೆಸರಿನಲ್ಲಿರುವ ತರುವಾಯದ ಕ್ರಯ ಪತ್ರಗಳಿಗೆ ಕಾನೂನು ಪರಿಣಾಮವಾಗದು ಎಂದು ಅಭಿಪ್ರಾಯ ಪಡಲಾಗಿದೆ.ವಾದಿಯನ್ನು ನಿರುಪಾಧಿಕ ಒಡೆಯನನ್ನಾಗಿ ಘೋಷಿಸಿ ದಾವೆಯನ್ನು ಡಿಕ್ಕಿ ಮಾಡಲಾಗಿದೆ.

13. ಈ ಹಿಂದೆ ಹೇಳಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಮಾನವನ್ನು, ನಿಯತ ಅಪೀಲುಸಂಖ್ಯೆ: 163/2007 ರಲ್ಲಿ ಪ್ರಧಾನ ಜಿಲ್ಲಾ ನ್ಯಾಯಾಧೀಶರು, ಕೋಲಾರ ಇವರ ಮುಂದೆ ಪ್ರಶ್ನಿಸಲಾಗಿದೆ.ಕೆಳ ಅಪೀಲು

ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯ ತೆಗೆದುಕೊಂಡ ಅಭಿಪ್ರಾಯವನ್ನು ಸ್ವೀಕರಿಸಿದೆ ಮತ್ತುದಿನಾಂಕ: 05.01.2008 ರ ತೀರ್ಪು ಮತ್ತು ಆದೇಶದ ಮೂಲಕ ಈ ಅಪೀಲನ್ನು ವಜಾಗೊಳಿಸಿದೆ.ಪ್ರತ್ಯರ್ಜಿದಾರರು ಎರಡನೇ ಅಪೀಲುಸಂಖ್ಯೆ: .323/2008 ನ್ನು ದಾಖಲು ಮಾಡುವ ಮೂಲಕ ವಿಷಯವನ್ನು ಮುಂದಕ್ಕೆ ತೆಗೆದುಕೊಂಡು ಹೋಗಿದ್ದು, ಅದನ್ನುದಿನಾಂಕ: 27.07.2010 ರ ತೀರ್ಪು ಮತ್ತು ಆದೇಶ ಮೂಲಕ ಅಂಗೀಕರಿಸಬಹುದಾಗಿದೆ.ಪರಭಾರೆಕಾರನನ್ನುದಿನಾಂಕ: 24.09.1981 ರಂದು ಆ ಭೂಮಿಯಿಂದ ಹೊರ ಹಾಕಲಾಗಿದ್ದು, ಮರು ಮಂಜೂರಾತಿಗೆ ಆದೇಶಿಸಿರುವ ದಿನಾಂಕದಂತೆ, ಪರಭಾರೆಕಾರನು ಸ್ವಾಧೀನದಲ್ಲಿರಲಾರನು ಮತ್ತು ಹಾಗೆಯೇ ಕೆಳ ನ್ಯಾಯಾಲಯಗಳು, ಲಕ್ಷ್ಮಣಗೌಡ ಮತ್ತು ಸೈಯದ್ ಬಶೀರ್ ಅಹಮ್ಮದ್ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ತೀರ್ಮಾನಗಳ ಮೇಲೆ ಅವಲಂಬಿಸಿರುವುದನ್ನು ಚ ಸಮರ್ಥಿಸಿಕೊಂಡಿಲ್ಲವೆಂದು ಉಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.ಪ್ರಸ್ತುತ ಚ ಅಪೀಲುದಾರನ ಪುನರವಲೋಕನ ಅರ್ಜಿಯನ್ನು ಉಚ್ಚ ನ್ಯಾಯಾಲಯವುದಿನಾಂಕ: ಚ 1.06.2011 ರ ಆದೇಶದ ಮೂಲಕ ತಿರಸ್ಕರಿಸಲಾಗಿದೆ.

14. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ವಕೀಲರಾದ ಶ್ರೀ ಸಂಪತ್ ಆನಂದಶೆಟ್ಟಿ ಮತ್ತು ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ವಕೀಲರಾದ ಶ್ರೀ ಎಸ್.ಎನ್. ಭಟ್ರುವರ ಅಹವಾಲನ್ನು ಆಲಿಸಿ ದಾಖಲೆಯನ್ನು ಪರಿಶೀಲಿಸಲಾಗಿದ್ದು, ಪರಸ್ಪರ ವಾದಗಳನ್ನು ನಾವು ಪರಿಗಣಿಸಿದ್ದೇವೆ.ದಿನಾಂಕ 01.02.1963 ಮತ್ತು 07.08.1978 ರ ನಡುವೆ ಇನಾಮು ಭೂಮಿಯ ಪರಭಾರೆಯು ಪರಭಾರೆಕಾರನ ಹಕ್ಕುಗಳಲ್ಲಿರುವಂತೆ ಕಾನೂನು ಅಂಶದ ಮೇಲೆ, ಸಂಭವಿಸಿದ್ದು, (ಮೇಲೆ ಹೇಳಲಾದ) ಲಕ್ಷ್ಮಣಗೌಡ ಮತ್ತು ಸೈಯದ್ ಬಶೀರ್ ಅಹಮ್ಮದ್ ಪ್ರಕರಣದ ತೀರ್ಮಾನಗಳಿಂದ ತೀರ್ಮಾನಿಸಲಾಗಿದೆ.

15. ಈ ಪ್ರಕರಣಗಳಲ್ಲಿ ಹೇಳಲಾದಂತೆ, ಹಿಡುವಳಿದಾರನ ಹೆಸರಿನಲ್ಲಿರುವ ಸೇವಾ ಇನಾಮು ಭೂಮಿಯ ಮರು ಮಂಜೂರಾತಿಯ ನಂತರದಿನಾಂಕ: 01.02.1963 ಮತ್ತು 07.08.1978 ರ ನಡುವೆ ಪರಭಾರೆಯಾಗಿದ್ದಲ್ಲಿ, ಮರು ಮಂಜೂರಾತಿಯು, ಪರಭಾರೆಕಾರನ ಪ್ರಯೋಜನವನ್ನು ಖಾತ್ರಿಗೊಳಿಸುತ್ತದೆ.ಮುಂದುವರಿದು, ಅಂಥ ಮರು ಮಂಜೂರಾತಿಯ ನಂತರ ಸೇವಾ ಇನಾಮು ಭೂಮಿಯ ಹಿಡುವಳಿದಾರನ ಹಕ್ಕುಸ್ವಾಮ್ಯವು ಈ ಅಧಿನಿಯಮ ಜಾರಿಗೆ ಬಂದ ದಿನಾಂಕಕ್ಕೆ ಸಂಬಂಧ ಪಡುವಂತಹದ್ದು.ಇಂತಹ ಸಂದರ್ಭಗಳಲ್ಲಿ, ಮರು ಮಂಜೂರಾತಿ ನಂತರ ಪ್ರತ್ಯರ್ಜಿದಾರರ ಪೂರ್ವಿಕರ ಹಕ್ಕು ಇದರಲ್ಲಿ ಈ ಹಿಂದಿನಂತೆಯೇ ಸಂಬಂಧಿಸುತ್ತದೆ.ದಿನಾಂಕ: 13.5.1971 ರಂದು ನಡೆದ ಪರಭಾರೆಯು, ' ವಿಬಂಧದ ಮೂಲಕ ಮಂಜೂರಾತಿ ನೀಡಿದ ನಿಯಮಗಳ ಮೂಲಕ ಪರಿಣಾಮಕಾರಿಯಾಗಿದ್ದು, ಅಂಥ ಮರು ಮಂಜೂರಾತಿಯ ತರುವಾಯ ಅಂಥ ಭೂಮಿಗೆ ಉತ್ತಮ ಸ್ವಾಮ್ಯವನ್ನು ಪಡೆದುಕೊಂಡಿರುವ ಪರಭಾರೆಕಾರನ ಪ್ರಯೋಜನವನ್ನು ಖಚಿತಪಡಿಸುತ್ತದೆ.ಪೂರ್ಣ ಪೀಠ ಅಭಿಪ್ರಾಯಪಟ್ಟಿರುವಂತೆ, ಪರಭಾರೆಯು,ದಿನಾಂಕ: 01.02.1963 ಮತ್ತುದಿನಾಂಕ: 07.08.1978 ರ ನಡುವೆ ಸಂಭವಿಸಿದ್ದಲ್ಲಿ, ಪರಭಾರೆಕಾರನು ಅನಧಿಕೃತ ಹಿಡುವಳಿದಾರನಾಗಿರುವುದಿಲ್ಲ ಎಂದು ಪೂರ್ಣ-ಪೀಠವು ಅಭಿಪ್ರಾಯಪಟ್ಟಿರುತ್ತದೆ.ಈ ಸಂದರ್ಭಗಳಲ್ಲಿ, ಪರಭಾರೆಕಾರನ ಅಂದರೆ ಪ್ರಸ್ತುತ ಅಪೀಲುದಾರನ ಹಿತಾಸಕ್ತಿಯಲ್ಲಿನ ಪೂರ್ವಾಧಿಕಾರಿಯ ವಿರುದ್ಧ ಅಧಿನಿಯಮದ 7 ನೇ ಪ್ರಕರಣದ ಅಡಿಯಲ್ಲಿ ಉಚ್ಚಾಟಿಸುವುದಕ್ಕಾಗಿ ವ್ಯವಹರಣೆಗಳನ್ನು ಪ್ರಾರಂಭಿಸಲು ತಹಸೀಲ್ದಾರ್ರು ಸಕ್ಷಮ ಪ್ರಾಧಿಕಾರವಾಗಿರುವುದಿಲ್ಲ.ಆದ್ದರಿಂದ, ಉಭಯ ಕೆಳ ನ್ಯಾಯಾಲಯಗಳು, ವಾದಿ-ಅಪೀಲುದಾರನ ಕೇಮನ್ನು ಅಂಗೀಕರಿಸಿರುವುದು ಸೂಕ್ತವಾಗಿದೆ ಮತ್ತು ಅದನ್ನು ಸಮರ್ಥಿಸಿಕೊಂಡಿದೆ ಮತ್ತು ಉಚ್ಚ ನ್ಯಾಯಾಲಯವು,

ಸಮವರ್ತಿ ಅಭಿಪ್ರಾಯವನ್ನು ತಳ್ಳಿಹಾಕುವುದರಲ್ಲಿ ಮತ್ತು ಎರಡನೇ ಅಪೀಲನ್ನು ಅಂಗೀಕರಿಸುವುದರಲ್ಲಿ ಸಂಪೂರ್ಣವಾಗಿ ದೋಷವೆಸಗಿದೆ.

16. ಆದ್ದರಿಂದ, ನಾವು, ಈ ಅಪೀಲುಗಳನ್ನು ಪುರಸ್ಕರಿಸಿದ್ದೇವೆ.ಅಪೀಲಿನ ಮೇರೆಗೆ ಉಚ್ಚ ನ್ಯಾಯಾಲಯದ ತೀರ್ಪು ಮತ್ತು ಆದೇಶಗಳನ್ನು ತಳ್ಳಿಹಾಕಲಾಗಿದೆ ಮತ್ತು ನಿಯತ ಅಪೀಲು ಸಂ .163/2007 ರಲ್ಲಿ ಅಪೀಲು ನ್ಯಾಯಾಲಯದಿಂದ ಸ್ಥಿರೀಕರಿಸಲಾದಂಥ ಓಎಸ್‌ಸಂಖ್ಯೆ: 19/2004 ರಲ್ಲಿ ಅಧಿವಿಚಾರಣಾ ನ್ಯಾಯಾಲಯ ಮಾಡಿದ ತೀರ್ಪು ಮತ್ತು ಡಿಕ್ಕಿಯನ್ನು ಪೂರ್ವ ಸ್ಥಿತಿಗೆ ತರಲಾಗಿದೆ.ವೆಚ್ಚಗಳಿಗೆ ಸಂಬಂಧಿಸಿದಂತೆ ಆದೇಶವಿರುವುದಿಲ್ಲ.